**2010**ರಲ್ಲಿ ಮಹೇಂದ್ರ ಸಿಂಗ್ ಧೋನಿ ದೊಡ್ಡ ಸೆಲೆಬ್ರಿಟಿ. ಅವರು ಬಿಟ್ಟಿದ್ದ ಕೂದಲು, ಅವರ ಹೆಲಿಕಾಪ್ಟರ್ ಶಾಟ್, ಆಗಿನ್ನೂ ಯಾವುದೋ ಕೋರ್ಸ್‌ಗೆ ಹೋಗಿ ಕಲಿತುಬಂದಂತೆ ಒಪ್ಪಿಸುತ್ತಿದ್ದ ಇಂಗ್ಲಿಷ್ ವಾಕ್ಯ... ಇವೆಲ್ಲವನ್ನೂ ನೋಡಿದ್ದ ಜನರಿಗೆ ಅವರೊಬ್ಬ ದೈವಿಕ ಪ್ರತಿಭೆ ಎನಿಸಿದ್ದು ಸಹಜ. ಆಗ ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿರುತ್ತಿದ್ದ ಧೋನಿ, ತಮ್ಮಿಷ್ಟದ ಪೋಸ್ಟ್‌ಗಳನ್ನೂ ಹಾಕುತ್ತಿದ್ದರೆನ್ನಿ. ಒಮ್ಮೆ ಅಭಿಮಾನಿಯೊಬ್ಬ, 'ನೀವು ಸಾಮಾಜಿಕ ಜಾಲತಾಣದಲ್ಲಿ ಸಮಯ ಕಳೆಯುವುದನ್ನು ಬಿಟ್ಟು, ಬ್ಯಾಟಿಂಗ್ ಫಾರ್ಮ್ ಕಡೆಗೆ ಲಕ್ಷ್ಯ ಕೊಡಿ' ಎಂಬರ್ಥದಲ್ಲಿ ವ್ಯಂಗ್ಯವಾಗಿ ಬರೆದು, ಟ್ಯಾಗ್ ಮಾಡಿದ್ದ. ಅದಕ್ಕೆ ಧೋನಿ, 'Any tips Pl.' ಎಂದಷ್ಟೆ ಪ್ರತಿಕ್ರಿಯಿಸಿದ್ದರು. ಪೋಸ್ಟ್ ಹಾಕಿದ್ದವನು ನಿರುತ್ತರನಾಗಿದ್ದ.

'ಪುಷ್ಪಾ' ತೆಲುಗು ಸಿನಿಮಾದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದವರು ಅನಸೂಯಾ ಭಾರದ್ವಾಜ್. ನಟ ವಿಜಯ್ ದೇವರಕೊಂಡ ಪರವಾಗಿ ಪ್ರಚಾರ ಮಾಡುತ್ತಿದ್ದ ವ್ಯಕ್ತಿ ಹಣ ಕೊಟ್ಟು ತಮ್ಮ ವಿರುದ್ಧ ಟ್ರೋಲ್ ಮಾಡಿಸಿದ್ದರು ಎಂದು ಇತ್ತೀಚೆಗೆ ಅವರು ನೇರವಾಗಿ ಆರೋಪಿಸಿದರು. ವಿಜಯ್ ದೇವರಕೊಂಡ ನಾಯಕರಾಗಿ ನಟಿಸಿದ್ದ 'ಅರ್ಜುನ್ ರೆಡ್ಡಿ' ಸಿನಿಮಾ ತೆರೆಕಂಡ ಮೇಲೆ ಅನಸೂಯಾ ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ಪೋಸ್ಟ್‌ಗಳನ್ನು ಮಾಡಿ, ಚಿತ್ರದ ನಾಯಕನ ಧೋರಣೆಯನ್ನು ಖಂಡಿಸಿದ್ದರು. ಹೆಣ್ಣನ್ನು ಅತಿ ಕೆಟ್ಟದಾಗಿ ಬಿಂಬಿಸುವ ಆ ಸಿನಿಮಾದ ಕೇಂದ್ರಪಾತ್ರವನ್ನು ಹಾಗೂ ಅದರ ಪ್ರಚಾರದ ಸಲುವಾಗಿ ವೇದಿಕೆ ಮೇಲೆ ವಿಜಯ್ ಆಡುತ್ತಿದ್ದ ಮಾತನ್ನು ಅವರು ಖಾರವಾಗಿಯೇ ಟೀಕಿಸಿದ್ದರು. 'ಲೈಗರ್' ಸಿನಿಮಾ ಮಕಾಡೆಯಾದ ಮೇಲೆ ಅವರು ಇನ್ನೊಂದು ಪೋಸ್ಟ್ ಹಾಕಿ, 'ಕರ್ಮ ಯಾರನ್ನೂ ಸುಮ್ಮನೆ ಬಿಡುವುದಿಲ್ಲ' ಎಂಬರ್ಥದಲ್ಲಿ ಬರೆದಿದ್ದರು. ಸಿನಿಮಾರಂಗದಲ್ಲಿ ಎಲ್ಲರನ್ನೂ ಸ್ನೇಹದಿಂದ ಮಾತನಾಡಿಸುವ ಜಾಯಮಾನ ತಮ್ಮದು. ಹೀಗಿರುವಾಗ ಟ್ರೋಲ್‌ಗಳನ್ನು ಮಾಡಲು ಜನರನ್ನು ಛೂ ಬಿಟ್ಟು, ಮನಸ್ಸನ್ನು ಕಂಗೆಡಿಸಿದ್ದ ಸಂದರ್ಭವನ್ನು ಅನಸೂಯಾ ಮೆಲುಕು ಹಾಕಿದ್ದರು. 'ಲೈಗರ್' ಸಿನಿಮಾ ಸೋತಾಗ ತಾವು ಪೋಸ್ಟ್ ಮಾಡಿದ್ದು ಸರಿಯಲ್ಲ ಎಂದು ಆಮೇಲೆ ಒಪ್ಪಿಕೊಂಡ ಅವರು, ತಮ್ಮ ಮನಸ್ಸಿನ ಮೇಲೆ



ಟ್ರೋಲಿಗರ ವಿರುದ್ಧದ ಗಟ್ಟಿ ದನಿ ತೆಲುಗು ನಟಿ ಅನಸೂಯಾ ಭಾರದ್ವಾಜ್



**'ನಿಂದಕರಿರಬೇಕು' ಎನ್ನುವುದು ದಾಸವಾಣಿ. ಈ ಕಾಲಘಟ್ಟದಲ್ಲಿ ಅದೇ 'ಟ್ರೋಲರ್‌ಗಳಿರಬೇಕು' ಎಂದಾಗಿದೆ. ಆದರೆ, ನಿಂದಕರು ಬೇಕಾಗುವುದು ಆತ್ಮವಿಶ್ವಾಸ ಗಟ್ಟಿಗೆ ಪ್ರೇರೇಪಿಸಲು ಹಾಗೂ ಆತ್ಮವಿಮರ್ಶೆಗಾಗಿ. ಈಗ ಹಾಗಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಅನಾಮಧೇಯರಾಗಿ ತಮಗೆ ತೋಚಿದ್ದನ್ನು ಟೈಪಿಸಿಬಿಡುವ ಮುಕ್ತ ಅವಕಾಶವಿದೆ.**